ಸೂಚನೆಯನ್ನು ಕೊಟ್ಟಿದ್ದಾರೆ. ಒಂದು ಸಾರಿ ಜಗಳವೂ ಆಗಿದೆ. ಇಷ್ಟೆಲ್ಲಾ ಆದರೂ ಸರ್ಕಾರಕ್ಕೆ ಇನ್ನೂ ಬುದ್ಧಿ ಬಂದಿಲ್ಲವೆಂದರೆ, ಇನ್ನು ಯಾವ ರೀತಿಯಲ್ಲಿ ನಾವು ಪ್ರತಿಭಟನೆಯನ್ನು ಮಾಡಬೇಕು.

ಅಧ್ಯಕ್ಷರು : ನಾನು ಉತ್ತರವನ್ನು ತರಿಸಿಕೊಡುತ್ತೇನೆ. ನಿಮ್ಮ ಭಾವನೆಗಳನ್ನು ಪರಿಣಾಮಕಾರಿಯಾಗಿ ಸರ್ಕಾರಕ್ಕೆ ತಿಳಿಸಿ ಉತ್ತರವನ್ನು ಆದಷ್ಟು ಬೇಗ ತಮಗೆ ತರಿಸಿ ಕೊಡುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ನೀವು ಕೊಡುವ ಉತ್ತರವೇ ಆಗಿದೆ. ಅವರು ಕೊಡುವಂತಹ ಉತ್ತರ ಈಗ ಇಲ್ಲ.

ಅಧ್ಯಕ್ಷರು : ಏನು ಮಾಡುವುದು, ಇದೆಲ್ಲಾ ಜಾತಕದ ಫಲ, ಯಾರ್ಯಾರು ಏನೇನು ಕೇಳಿಕೊಂಡು ಬಂದಿದ್ದಾರೊ, ಅದನ್ನು ಅನುಭವಿಸಬೇಕು.

ಪಾಂಡವಪುರಕ್ಷೇತ್ರದಲ್ಲಿ ಮುಜರಾಯಿ ಇಲಾಖೆಗೆ ಸೇರಿದ ದೇವಸ್ಥಾನಗಳ ಜೀರ್ಣೋದ್ಧಾರ

174 - ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಾಂಡವಪುರ ಕ್ಷೇತ್ರದಲ್ಲಿ ಮುಜರಾಯಿ ಇಲಾಖೆಗೆ ಸೇರಿದ ದೇವಸ್ಥಾನಗಳು ಎಷ್ಟು; ಇಲ್ಲಿಯವರೆಗೆ ಜೀರ್ಣೋದ್ಧಾರಕ್ಕಾಗಿ ಎಷ್ಟು; ಹಣ ಬಿಡುಗಡೆ ಮಾಡಲಾಗಿದೆ;

ಆ) ಸದರಿ ತಾಲ್ಲೂಕಿನ ಯಾವ ಯಾವ ದೇವಸ್ಥಾನಗಳಿಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ.

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು) :

ಅ) ಪಾಂಡವಪುರ ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು 295 ಮುಜರಾಯಿ ಸಂಸ್ಥೆಗಳಿಗೆ 1990-91 ರಿಂದ ಈವರೆಗೂ ರೂ. 3,10,000-00 ಬಿಡುಗಡೆ ಮಾಡಲಾಗಿದೆ.

ಆ) -ಪಟ್ಟಿ ಲಗತ್ತಿಸಿದೆ-

ಅನುಬಂಧ

ಸಾಲು	ದೇವಾಲಯದ ಹೆಸರು	ಬಿಡುಗಡೆ ಮಾಡಿರುವ ಅನುದಾನ
1990-91	ಶ್ರೀ ಬೋರೆಸ್ವಾಮಿ ದೇವಾಲಯ, ಜಕ್ಕನಹಳ್ಳಿ	10,000-00
1992-93	ಶ್ರೀ ತಿರುನಾರಾಯಣ ಮೇಲುಕೋಟೆ	2,00,000-00
1993-94	ಶ್ರೀ ಕಾಳಮ್ಮ ದೇವಸ್ಥಾನ ಇಂಗಲಗುಡ್ಡೆ	25,000-00
1993-94	ಶ್ರೀ ಬೈರವೇಶ್ವರ ದೇವಸ್ಥಾನ, ಮಾಣಿಕ್ಯದಹಳ್ಳಿ	25,000-00
1993-94	ಶ್ರೀ ಹನುಮಂತರಾಯಸ್ವಾಮಿ ದೇವಸ್ಥಾನ, ಕಾಡೇನಹಳ್ಳಿ	25,000-00
1995-96	ಶ್ರೀಯೋಗನರಸಿಂಹಸ್ವಾಮಿ ದೇವಸ್ಥಾನ ಮೇಲುಕೋಟೆ	25,000-00
		ಬಿಡುಗಡೆಯಾಗಿಲ್ಲ

ಸಾಲು	ದೇವಾಲಯದ ಹೆಸರು	ಬಿಡುಗಡೆ ಮಾಡಿರುವ ಅನುದಾನ
	ಶ್ರೀ ನಾರಾಯಣಸ್ವಾಮಿ ದೇವಸ್ಥಾನ	25,000-00
	ವೇದಾಂತ ದೇಶಿಕರ ಸನ್ನಿದಿ, ಮೇಲುಕೋಟೆ	ಬಿಡುಗಡೆಯಾಗಿಲ್ಲ
	ಶ್ರೀ ಆಂಜನೇಯ ದೇವಸ್ಥಾನ, ಕುರಹಟ್ಟಿ	25,000-00
	ಒಟ್ಟು ರೂ.	**3,60,000-00**
ಷರಾ :	ಮೇಲ್ಕಂಡ8 ದೇವಾಲಯಗಳಿಗೆ ಒಟ್ಟು ರೂ. 3,60,000-00	**3,10,000-00**
	ಮಂಜೂರಾಗಿದ್ದು, ಅದರಲ್ಲಿ - ಸಂಸ್ಥೆಗಳನ್ನು ಹೊರತುಪಡಿಸಿ ಉಳಿದ 6 ಸಂಸ್ಥೆಗಳಿಗೆ ರೂ. 3,10,000-00 ಬಿಡುಗಡೆ ಮಾಡಲಾಗಿದೆ.	**50,000-00**

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಮಾನ್ಯ ಅಧ್ಯಕ್ಷರೆ, 1990-91ನೇ ಇಸವಿಯವರೆಗೂ ಸುಮಾರು 295 ದೇವಸ್ಥಾನಗಳಿಗೆ3,10,000 ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ನಾವು ಹೇಳುವುದೇನೆಂದರೆ ಇವರು ದೇವಸ್ಥಾನಗಳಿಗೆ ದುಡ್ಡು ಕೊಡುವುದಿಲ್ಲವೆಂದು ಒಂದು ತೀರ್ಮಾನಕ್ಕೆ ಬಂದರೆ ನಾವು ಯಾವುದಾದರೂ ಕ್ಷೇತ್ರಕ್ಕೆ ಹೋದರೆ ಅಥವಾ ಯಾವುದಾದರೂ ಊರಿಗೆ ಹೋದರೆ ದೇವಸ್ಥಾನಗಳಿಗೆ ದುಡ್ಡು ಕೇಳಿದರೆ ಕೊಡುವುದಕ್ಕಾಗುವುದಿಲ್ಲವೆಂದು ಹೇಳಬಹುದು. ನೀವು ಆರಾಧನಾ ಸಮಿತಿ ಎಂದು ನಮ್ಮನ್ನು ಅಧ್ಯಕ್ಷರನ್ನಾಗಿ ಮಾಡಿದ್ದೀರಿ.ನಮ್ಮನ್ನು ಎಲ್ಲಾರೂ ಆಂಜನೇಯ ಸಮಿತಿ ಎಂದು ಅಲ್ಲಿ ಮಾಡುತ್ತಿದ್ದಾರೆ. ಆದುದರಿಂದ ತಾವು ದಯಮಾಡಿ ಆರಾಧನ ಸಮಿತಿಯ ಕಲ್ಪನೆಯನ್ನು ಹೇಳಬೇಕು. ಮುಜರಾಯಿ ದೇವಸ್ಥಾಗಳಿಗೆ ಹೆಚ್ಚುವರಿ ಹಣ ಬೇಕೆಂದರೆ ತಾವು ಯಾವ ರೀತಿಯಲ್ಲಿ ಒದಗಿಸುತ್ತೀರಿ. ಅದನ್ನು ತೆಗೆದುಕೊಳ್ಳಬೇಕೆಂದರೆ ದೇವರಲ್ಲೂ ಮೀಸಲಾತಿ ಮಾಡಿಕೊಂಡರೆ ಒಳ್ಳೆಯದು, ಬಹಳ ಕೆಟ್ಟು ಹೋದ ಗುಡಿಗಳು, ಸುಮಾರು ಮಧ್ಯಮ ವರ್ಗದ ಗುಡಿಗಳು ಎಂದು . ಬಹಳ ಚೆನ್ನಾಗಿ ಇರುವಂತಹ ಗುಡಿಗಳು ಇದ್ದರೆ ಒಳ್ಳೆಯದು ಆದರೆ ಕೆಟ್ಟು ಹೋಗಿರುವಂತಹ ಗುಡಿಗಳಿಗೆ ಆರ್ಜೆಂಟಾಗಿ ಹಣವನ್ನು ಕೊಡುವಂತಹ ವ್ಯವಸ್ಥೆಯಾಗಬೇಕು. ಯಾವುದು ಸರಿಯಾದಂತಹ ರೀತಿಯಲ್ಲಿಲ್ಲದಿದ್ದರೆ ಆರಾಧನಾ ಸಮಿತಿಗೆ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಿದ್ದೀರಿ. ನೀವೂ ಹಣವನ್ನು ಕೊಡುವುದಿಲ್ಲಿ, ಮುಜರಾಯಿ ದೇವಸ್ಥಾನಗಳಿಗೆ ಹಣವನ್ನು ಕೊಡುವುದಿಲ್ಲವೆಂದರೆ ನಾವು ಯಾವ ರೀತಿಯಲ್ಲಿ ಅಲ್ಲಿ ಕೆಲಸವನ್ನು ಮಾಡುವುದು. ತಾವು ಹಣವನ್ನು ಕೊಡುವುದಿಲ್ಲವೆಂದು ಹೇಳಿದರೆ ಸರ್ಕಾರ ಹಣವನ್ನು ಕೊಡುವುದಿಲ್ಲ ನಾವು ಏನೂ ಮಾಡುವುದಕ್ಕಾಗುವುದಿಲ್ಲವೆಂದು ಹೇಳಬಹುದು. ಆದುದರಿಂದ ತಾವು ಯಾವ ರೀತಿಯಲ್ಲಿ ಹಣವನ್ನು ಕೊಡುತ್ತೀರೆಂಬುದನ್ನು ದಯಮಾಡಿ ಹೇಳಬೇಕು. ಏಕೆಂದರೆ ಇದು ಗಂಭೀರವಾದಂತಹ ವಿಷಯವಾಗಿದೆ.

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ : ಮಾನ್ಯ ಅಧ್ಯಕ್ಷರೆ, ಈಗ ನಾವು ಆರಾಧನಾ ಯೋಜನೆಗೆ ಕೊಟ್ಟಿರುವಂತಹ ದುಡ್ಡನ್ನು ಪರಿಶೀಲನೆ ಮಾಡಿದಾಗ ಆಯಾ ಜಿಲ್ಲೆಗಳಲ್ಲಿ ಇನ್ನೂ ಸಾಕಷ್ಟು ಹಣ ಉಳಿದಿದೆ. ಅದನ್ನು ಉಪಯೋಗ ಮಾಡಿಕೊಂಡಿಲ್ಲ.

ಅಧ್ಯಕ್ಷರು : ಮಾನ್ಯ ಮುನಿಯಪ್ಪನವರೆ, ತಾವು ಏಕೆ ಹಾಗೆ ಹೇಳುತ್ತೀರಿ. ನಮ್ಮ ಅನುಭವವೇ ಬೇರೆ ಇದೆ. ನಾವು ಎಲ್ಲಾ ಕೆಲಸಗಳನ್ನು ಮಾಡುತ್ತೇವೆ, ದುಡ್ಡು ರಿಲೀಸ್ ಮಾಡುವುದಿಲ್ಲ. ನಿಮ್ಮ ಡೆಪ್ಯೂಟಿ ಕಮೀಷನರ್‌ರವರು ಆ ಕಡೆ ಗಮನವನ್ನು ಕೊಡುವುದಿಲ್ಲ. ನಮ್ಮ ಮೆಂಬರ್ಸ್ ಮೀಟಿಂಗ್ ಮಾಡಿ, ಬರೆದು ಕಳುಹಿಸುತ್ತಾರೆ. ಅವರು ದುಡ್ಡು ಕೊಡುವುದಿಲ್ಲ, ನೀವು ದುಡ್ಡು ಖರ್ಚಾಗಿಲ್ಲವೆಂದು ಹೇಳುತ್ತೀರಿ. ಆ ದುಡ್ಡನ್ನು ಹಾಗೆ ಇಟ್ಟುಕೊಳ್ಳಲಿಕ್ಕೆ ಹೇಳಿ, ಅದನ್ನು ಪೂಜೆ ಮಾಡಿದರೆ ದ್ವಿಗುಣವಾಗುತ್ತದೆ. ನಾನು ಸಭಾಧ್ಯಕ್ಷನಾಗಿರುವುದರ ಜೊತೆಗೆ ಒಬ್ಬ ಸದಸ್ಯನೂ ಆಗಿದ್ದೇನೆ. ನಾನು ಒಂದು ಕ್ಷೇತ್ರವನ್ನು ಪ್ರತಿನಿಧಿಸಿದ್ದೇನೆ. ತಾವು ಏಕೆ ಈ ರೀತಿಯಾದಂತಹ ಉತ್ತರವನ್ನು ಹೇಳುತ್ತೀರಿ. ಮಾನ್ಯ ಭೈರೇಗೌಡರೆ, ನೀವೂ ಒಂದು ಗ್ರಾಮಾಂತರ ಪ್ರದೇಶವನ್ನು ಪ್ರತಿನಿಧಿಸಿದ್ದೀರಿ. ಆರಾಧನಾದಲ್ಲಿ ಹಣ ಖರ್ಚಾಗುವುದಿಲ್ಲವೆಂದು ಮಾನ್ಯ ಮಂತ್ರಿಯವರು ಹೇಳುತ್ತಿದ್ದಾರೆ. ನಿಮ್ಮ ಅಧಿಕಾರಿಗಳು ಸಹಕಾರವನ್ನು ಕೊಟ್ಟರೆ ತಾನೆ ಹಣ ಖರ್ಚಾಗುವುದು.

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ : ಮಾನ್ಯ ಅಧ್ಯಕ್ಷರೆ, ನಿಮಗೆ ಅದರ ಲಿಸ್ಟ್ ಕಳುಹಿಸಿಕೊಡುತ್ತೇನೆ.

ಅಧ್ಯಕ್ಷರು : ನೀವು ಎಷ್ಟು ಕೋಟಿ ರೂಪಾಯಿಗಳನ್ನು ಕೊಡುತ್ತೀರಿ. ನಾನು ಅದನ್ನು ಖರ್ಚು ಮಾಡಿಸಿ ಕೊಡುತ್ತೇನೆ. ನೀವು ಎಷ್ಟು ದಿವಸ ಟೈಮ್ ಕೊಡುತ್ತೀರಿ.

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ : ನಾವು ಆರು ಕೋಟಿ ರೂಪಾಯಿಗಳನ್ನು ಕೊಡುವುದಕ್ಕೆ ಪ್ರಯತ್ನವನ್ನು ಮಾಡಿದ್ದೇವೆ.

ಅಧ್ಯಕ್ಷರು : ಗಂಗಮ್ಮ ಮಾರಮ್ಮ ಗುಡಿಗಳನ್ನು ಕಟ್ಟಿ ಅದಕ್ಕೆ ನೀವು ಮೂರು ಕಾಸನ್ನು ಕೊಡಲಿಲ್ಲ.

(ಗೊಂದಲ)

ಶ್ರೀ ಸಿ. ಭೈರೇಗೌಡ : ಮಾನ್ಯ ಅಧ್ಯಕ್ಷರೆ, ಸಾಮಾನ್ಯವಾಗಿ ಹಳ್ಳಿಗಳಲ್ಲಿ ಮುಜರಾಯಿ ಇಲಾಖೆಗಳಿಗೆ ಸಂಬಂಧಪಟ್ಟಂತಹ ದೇವಸ್ಥಾನಗಳು ಮತ್ತು ಮುಜರಾಯಿ ಇಲಾಖೆಗೆ ಸಂಬಂಧಪಡದೆ ಇರುವಂತಹ ದೇವಸ್ಥಾನಗಳೂ ಇವೆ. ಅದರಲ್ಲಿ ಮುಜರಾಯಿ ಇಲಾಖೆಗೆ ಸಂಬಂಧಪಟ್ಟ ದೇವಸ್ಥಾನಗಳ ಬೇಡಿಕೆ ಏನಿದೆ ಎಂದರೆ ಮಾನ್ಯ ಪುಟ್ಟಣ್ಣಯ್ಯನವರು ಹೇಳಿದ ಹಾಗೆ ಅನೇಕ ದೇವಸ್ಥಾನಗಳು ಬಹಳ ದುಃಸ್ಥಿತಿಯಲ್ಲಿದೆ. ಅವುಗಳ ಬೇಡಿಕೆ ವಿಪರೀತ ಇದೆ. ಮಾನ್ಯ ಮಂತ್ರಿಯವರು ಆರು ಕೋಟಿ ರೂಪಾಯಿಗಳನ್ನು ಕೊಡುವ ಪ್ರಯತ್ನವನ್ನು ನಡೆಸಿದ್ದಾರೆ. ನಮ್ಮ ಹಣಕಾಸಿನ ಮಂತ್ರಿಗಳು ಇಲ್ಲಿದ್ದಾರೆ. ಈ ವರ್ಷದ ಯೋಜನಾ ಹಣದಲ್ಲಿ ನಾವು ಅದನ್ನು ಕಡಿತ ಮಾಡುವಂತಹ ಪರಿಸ್ಥಿತಿ ಕೂಡ ಇದೆ. ಅಂತಹ ಸಂದರ್ಭದಲ್ಲೂ ಸಹ ಅವರು ಹೆಚ್ಚಿನ ಹಣವನ್ನು ಪಡೆಯುವಂತಹ ಪ್ರಯತ್ನವನ್ನು ಮಾಡಿದ್ದಾರೆ.

(ಗೊಂದಲ)

ಅಧ್ಯಕ್ಷರು : ಇಲ್ಲ, ನಾನು ತಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ. ಮಾನ್ಯ ಮಂತ್ರಿಗಳು ಆರಾಧನಾಕ್ಕೆ ಏನು ಹಣವನ್ನು ಕೊಟ್ಟಿದ್ದಾರೆ. ಆ ಹಣವೇ ಖರ್ಚಾಗಿಲ್ಲವೆಂದು ಹೇಳಿದರು.

(ಗೊಂದಲ)

ಶ್ರೀ ಸಿ. ಬೈರೇಗೌಡ : ಕೆಲವು ಕಡೆ ನಿಜವಾಗಿದೆ. ಇಡೀ ರಾಜ್ಯದಲ್ಲಿ ಯಾವ ಯಾವ ತಾಲ್ಲೂಕುಗಳಲ್ಲಿ ಎಷ್ಟೆಷ್ಟು ಹಣವನ್ನು ಒದಗಿಸಲಾಗಿತ್ತು ಮತ್ತು ಎಷ್ಟೆಷ್ಟು ಹಣ ಖರ್ಚಾಗಿದೆ ಎನ್ನುವಂತಹ ತಃಖ್ತೆಯನ್ನು ಈ ಸದನದ ಮುಂದೆ ಇಡುವುದಕ್ಕೆ ಸರ್ಕಾರ ಸಿದ್ಧವಿದೆ. ಆಗ ನಿಜವಾದ ಪರಿಸ್ಥಿತಿ ಅರ್ಥವಾಗುತ್ತದೆ. ಎಷ್ಟು ಹಣ ಒದಗಿಸಲಾಗಿತ್ತು, ಎಷ್ಟು ಹಣ ಖರ್ಚಾಗಿದೆ ಎನ್ನುವಂಥಾದ್ದು ಸದನದ ಮುಂದಿಡುತ್ತೇವೆ.

ಶ್ರೀ ಕೆ.ಎಸ್. ಈಶ್ವರಪ್ಪ : ಖರ್ಚು ಮಾಡಿಲ್ಲದೆ ಇರುವುದು ಬೇಡ, ಖರ್ಚು ಆಗಿರುವುದನ್ನು ತಾವು ಕೊಡುತ್ತೀರೋ?

(ಗೊಂದಲ)

ಶ್ರೀ ಸಿ. ಬೈರೇಗೌಡ : ಖರ್ಚು ಮಾಡಿರುವ ಕಡೆ ಕೊಡಬೇಕೆಂದು ಅಲ್ಲ. ಎಷ್ಟು ಕ್ಷೇತ್ರಗಳಲ್ಲಿ ಹಣ ಖರ್ಚು ಆಗಿದೆ, ಎಷ್ಟು ಕ್ಷೇತ್ರಗಳಲ್ಲಿ ಖರ್ಚಾಗಿಲ್ಲವೆನ್ನುವಂತಹ ಮಾಹಿತಿಯನ್ನು ನಾವು ಸದನದ ಮುಂದಿಡುತ್ತೇವೆ.

ಅಧ್ಯಕ್ಷರು : ತಮ್ಮ ಮಾತನ್ನು ನಾವು ವಿಶ್ವಾಸಕ್ಕೆ ತೆಗೆದುಕೊಂಡಿದ್ದೇವೆ. ತಾವು ಹೇಳಿದಂತಹ ಮಾತನ್ನು ನಾವು ಒಪ್ಪಿದ್ದೇವೆ. ತಾವು ಎಲ್ಲಾ ವಿವರಗಳನ್ನು ಸವಿಸ್ತಾರವಾಗಿ ಇನ್ನೊಂದು ಸಲ ಅವಕಾಶ ಸಿಕ್ಕಾಗ ದಯಮಾಡಿ ಸದನದ ಮುಂದಿಡಿ.

(ಗೊಂದಲ)

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಆರಾಧನಾ ಸಮಿತಿಯಲ್ಲಿ ಮುಜರಾಯಿಗೆ ಸಂಬಂಧಪಟ್ಟ ಹಾಗೆ ಇಷ್ಟು ಕೊಡುತ್ತೇವೆ. ನೀವು ಇಷ್ಟರಲ್ಲೆ ಸಂಬಂಧಪಟ್ಟ ದೇವಸ್ಥಾನಗಳ ಮಾಹಿತಿಯನ್ನು ಕೊಡಿ ಎಂದು ಹೇಳಿದಾಗ ಸುಲಭವಾಗುತ್ತದೆ. ಆಯಾಯ ವರ್ಷದ ಹಣವನ್ನು ಆಯಾಯ ವರ್ಷವೇ ಖರ್ಚು ಮಾಡಬೇಕೆಂದು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ತಾವು ಹೇಳಬೇಕು. ಈಗ ಎರಡು ವರ್ಷಗಳ ಮೇಲೆ ಮೂರು ತಿಂಗಳುಗಳಾಗಿದೆ. ಈಗ ಉದಾಹರಣೆಗೆ ನಾನು ಹೇಳುತ್ತೇನೆ. ತಾವು ಒಂದೂವರೆ ವರ್ಷಗಳ ಮೇಲೆ ನಮ್ಮನ್ನು ಆರಾಧನಾ ಸಮಿತಿಯ ಅಧ್ಯಕ್ಷರನ್ನಾಗಿ ಮಾಡಿದ್ದೀರಿ. ಈಗ ಎರಡು ತಿಂಗಳುಗಳ ಹಿಂದೆ ಆರಾಧನಾ ಸಮಿತಿಯ ಮೀಟಿಂಗ್ ಅನ್ನು ಕರೆದು ಯಾವ ಯಾವ ದೇವಸ್ಥಾನಗಳಿಗೆ ಎಷ್ಟೆಷ್ಟು ಅದರ ಮಾಹಿತಿಯನ್ನು ಜಿಲ್ಲಾಧಿಕಾರಿಗಳಿಗೆ ಕಳುಹಿಸಿಕೊಟ್ಟಿದ್ದೇವೆ. ಇದುವರೆಗೂ ಒಂದು ಪೈಸೆ ಬಂದಿಲ್ಲ.

10.40 ಎ.ಎಂ.

ನಾನು ಹೇಳುವುದೇನೆಂದರೆ, ನಿಜವಾಗಿಯೂ ಜನರು ಮೌಢ್ಯತೆಯಿಂದ ಮಾಡುತ್ತಾರೋ ಏನು ಮಾಡುತ್ತಾರೋ ನನಗೆ ಗೊತ್ತಿಲ್ಲ. ತಾವು ಆರಾಧನಾ ಸಮಿತಿಯನ್ನು ಮಾಡಿದ ಮೇಲೆ ಜನರು ನಮ್ಮ ಹತ್ತಿರ ಬಂದು ನಾವು ದೇವಸ್ಥಾನ ಮಾಡುತ್ತೇವೆ, 20 ಸಾವಿರ ರೂಪಾಯಿ ಕೊಡಿ ಎಂದು ಕೇಳಿದರು.

ತಾವು ಏನು ಆದೇಶ ಕೊಟ್ಟಿದ್ದಿರಿ ಅದರ ಮೇಲೆ ನಾವು ಕೊಟ್ಟುಬಿಟ್ಟೆವು. ಅವರು ಹಣ ಬಂದಿಲ್ಲವೆಂದು ನಮ್ಮಹತ್ತಿರ ಬರುತ್ತಾರೆ. ಆದ್ದರಿಂದ, ತಾವು ಯಾವುದನ್ನೇ ಅನುಷ್ಠಾನಕ್ಕೆ ತರಬೇಕಾದರೆ, ಅದಕ್ಕೊಂದು ಕಾಲಮಿತಿ ಇರಬೇಕು, ಜವಾಬ್ದಾರಿಯುತವಾಗಿ ಕಾರ್ಯನಿರ್ವಹಣೆ ಮಾಡಬೇಕೆಂದು ಆದೇಶ ಕೊಡಬೇಕು. ಈ ಸಮಸ್ಯೆ ಇನ್ನೊಂದು ಸಾರಿ ಈ ಸದನದಲ್ಲಿ ಬಾರದ ಹಾಗೆ ಮಾಡಬೇಕು. ದೇವಸ್ಥಾನವಾಗದಿದ್ದರೆ ಜನರು ನಮ್ಮನ್ನು ಬಿಡುವುದಿಲ್ಲ.

ಅಧ್ಯಕ್ಷರು : ಅವರು ಮಾಡುತ್ತಾರೆ ಬಿಡಿ. ಶ್ರೀಮಾನ್ ಪಿ.ಜಿ.ಆರ್. ಸಿಂಧ್ಯಾರವರೆ, ಬಿ.ಟಿ. ಲಲಿತಾನಾಯಕ್‌ರವರ ಪ್ರಶ್ನೆಗೆ ಉತ್ತರ ಕೊಡಿ.

ದೇವದುರ್ಗಕ್ಕೆ ಬಸ್ ಡಿಪೋ

166 - ಶ್ರೀಮತಿ ಬಿ.ಟಿ. ಲಲಿತಾ ನಾಯಕ್ (ದೇವದುರ್ಗ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನಲ್ಲಿ ಒಂದು ಬಸ್ ಡಿಪೋ ಬೇಕೆಂದು ಬೇಡಿಕೆ ಬಹುದಿನಗಳಿಂದ ಇದ್ದು ಸರ್ಕಾರ ಎಷ್ಟು ದಿನಗಳಲ್ಲಿ ಈ ಬೇಡಿಕೆಯನ್ನು ಈಡೇರಿಸುವುದು?

ಆ) ರಾಜ್ಯದ ಹೆಚ್ಚುಕಡಿಮೆ ಎಲ್ಲಾ ತಾಲ್ಲೂಕು ಬಸ್‌ನಿಲ್ದಾಣಗಳಲ್ಲಿ ಶೌಚಾಲಯವು ಅತ್ಯಂತ ಕೊಳಕಾಗಿದ್ದು ಅವುಗಳನ್ನು ಉಪಯೋಗ ಮಾಡಲು ಸಾಧ್ಯವೇ ಇರದಂತಹ ಪರಿಸ್ಥಿತಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಶೌಚಾಲಯಗಳನ್ನು ಶುಚಿಯಾಗಿಡಲು ಹಾಗೂ ಸಾರ್ವಜನಿಕರಿಗೆ ತಿಳುವಳಿಕೆ ಮೂಡಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಸಾರಿಗೆ ಸಚಿವರು) :

ಅ) ದೇವದುರ್ಗದಲ್ಲಿ ಬಸ್ ಘಟಕವನ್ನು ಕೂಡಲೇ ಸ್ಥಾಪಿಸುವ ಅವಶ್ಯಕತೆಯು ಸದ್ಯಕ್ಕಿರುವುದಿಲ್ಲ.

ಆ) ರಾಜ್ಯದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಒಟ್ಟು 286 ಬಸ್ ನಿಲ್ದಾಣಗಳ ಪೈಕಿ 172ನ್ನು ತಾಲ್ಲೂಕು ಕೇಂದ್ರ ಹಾಗೂ ಜನ ದಟ್ಟಣೆಯ ಬಸ್ ನಿಲ್ದಾಣಗಳೆಂದು ಗುರುತಿಸಿ ಇವುಗಳಲ್ಲಿ ಶೌಚಾಲಯಗಳನ್ನು ನಿರ್ಮಿಸಲಾಗಿದೆ. ಹಾಗೂ ಇವು ಉಪಯೋಗಿಸುವ ಮಟ್ಟದಲ್ಲಿವೆ.

ಇ) ಈ ಶೌಚಾಲಯಗಳನ್ನು ಶುಚಿಯಾಗಿಡಲು ಖಾಸಗಿ ವ್ಯಕ್ತಿಗಳನ್ನು 'ಪೇ ಅಂಡ್ ಯೂಸ್' ಪದ್ಧತಿಯನ್ವಯ ನೇಮಿಸಲಾಗಿದೆ. ಹಾಗೂ ಸುಲಭ ಇಂಟರ್‌ನ್ಯಾಷನಲ್‌ರವರಿಗೂ ವಹಿಸಲಾಗಿದೆ ಉಳಿದವನ್ನು ಸಂಸ್ಥೆಯು ನಿರ್ವಹಿಸುತ್ತದೆ. ಸಾರ್ವಜನಿಕರಿಗೆ ಇವುಗಳನ್ನು ಶುಚಿಯಾಗಿಡಲು ಬರಹಗಳ ಮೂಲಕ ಮನವಿ ಮಾಡಲಾಗಿದೆ.